ಮೂಲ ದಾವೆ ನಂ. 218/2022

ಪಿ.ಡಬ್ಲ್ಯೂ.02

ದಿನಾಂಕಃ 01-07-2024.
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.
**ಮುಖ್ಯ ವಿಚಾರಣೆ ವಾದಿ ಪರ ವಕೀಲರಿಂದ ಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ.

2. ನಿಪಿ.1 ನೊಂದಾಯಿತ ಖರೀದಿ ಕರಾರು ಪತ್ರವನ್ನು ಸಾಕ್ಷಿ ನೋಡಿ ಅದರ ಮೇಲಿರುವ ತನ್ನ ಸಹಿಯನ್ನು ಗುರುತಿಸಿದ್ದರಿಂದ ಅದನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ಸದರಿ ನಿಪಿ.1 ಕ್ಕೆ ನಾನು, ಮಲ್ಲಣ್ಣ ತಂದೆ ಶರಬಣ್ಣ ಯಮನಪ್ಪ ಎನ್ನುವವರು ಸಹಿ ಹಾಕಿರುತ್ತಾರೆ. ವಾದಿ ಮತ್ತು ಪ್ರತಿವಾದಿಯೂ ಸಹ ನಿಪಿ.1 ಕ್ಕೆ ಸಹಿ ಹಾಕಿರುತ್ತಾರೆ. ನಿಪಿ.1 ಕ್ಕೆ ಪ್ರತಿವಾದಿ ಭಾಗಮ್ಮ ಇವರು ತಮ್ಮ ಹೆಬ್ಬಟ್ಟಿನ ಗುರುತಿನ ಸಹಿ ಹಾಕಿರುತ್ತಾರೆ ಅವರ ಸಹಿ ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.1(ಸಿ) ಎಂದು, ಮಲ್ಲಪ್ಪ ತಂದೆ ಶರಬಣ್ಣ ಹಾಗೂ ಮಾನಪ್ಪ ಇವರ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ.1 (ಡಿ) ಮತ್ತು (ಇ) ಎಂದು ಗುರುತಿಸಲಾಯಿತು. ವಾದಿಯ ಸಹಿ ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.1 (ಎ) ಎಂದು ಗುರುತಿಸಲಾಗಿದೆ. ಸಾಕ್ಷಿಯು ಮಲ್ಲಪ್ಪ ತಂದೆ ಮರೆಪ್ಪ ಇವರ ಸಹಿ ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.1 (ಎಫ್) ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಸದರಿ ಮಲ್ಲಪ್ಪ ತಂದೆ ಮರೆಪ್ಪ ಇವರು ಮರಣ ಹೊಂದಿರುತ್ತಾರೆ ಎಂದು ಹೇಳುತ್ತಾರೆ.

**ಪಾಟಿ ಸವಾಲುಃ** ಪ್ರತಿವಾದಿ ಪರ ವಕೀಲರು ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.